# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 10/2019**

**ದೋ.ಸಾ. : 12 ಫ್ರಾ.ಸಾ. :49**

| | | |
|---|---|---|
| ಸಾಕ್ಷಿಯ ಹೆಸರು | : | ರಾಘವೇಂದ್ರ ನಾರಾಯಣ ನಾಯ್ಕ |
| ತಂದೆಯ ಹೆಸರು | : | ನಾರಾಯಣ ನಾಯ್ಕ |
| ವಯಸ್ಸು | : | 33 ವರ್ಷ |
| ಕೆಲಸ | : | ಸೆಂಟ್ರಿಂಗ್ ಕೆಲಸ |
| ವಾಸ | : | ಹರಿದೇವನಗರ, ಹಬ್ಬುವಾಡ, ಕಾರವಾರ |

**ದಿನಾಂಕಃ 15-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ-</u>**

1. ದಿ.28-10-2018 ರಂದು ನಾನು ಹಾಗೂ ನನ್ನ ಸ್ನೇಹಿತ ಚಾಸಾ-11 ರವರು ಸವಿತಾ ಹೋಟೆಲಿನ ಬಳಿ ಇದ್ದಾಗ, ಕಾರವಾರ ಪೊಲೀಸರು ನಮ್ಮನ್ನು ಪಂಚನಾಮೆಗೆ ಕರೆದಿರುತ್ತಾರೆ. ಅವರೊಂದಿಗೆ ಇಬ್ಬರು ವ್ಯಕ್ತಿಗಳು ಇದ್ದು, ತಾವು ಕತ್ತಿ ಖರೀದಿಸಿದ ಸ್ಥಳವನ್ನು ತೋರಿಸುತ್ತೇವೆ ಎಂದು ಹೇಳಿ, ನಮ್ಮನ್ನು ಕಾರವಾರದ ಸಂಡೇ ಮಾರ್ಕೆಟ್‌ಗೆ ಕರೆದುಕೊಂಡು ಹೋಗಿ, ಅಲ್ಲಿ ಒಂದು ಅಂಗಡಿಯನ್ನು ತೋರಿಸಿ ತಾವು ಇದೇ ಅಂಗಡಿಯಲ್ಲಿ ಕತ್ತಿಯನ್ನು ಖರೀದಿಸಿದ್ದಾಗಿ ಹೇಳಿದ ಮೇರೆಗೆ, ಪೊಲೀಸರು ಅಲ್ಲಿ ನಮ್ಮ ಸಮಕ್ಷಮ ಪಂಚನಾಮೆ ಮಾಡಿ, ನಿಪಿ-42 ರಂತೆ ಫೋಟೊ ತೆಗೆದಿರುತ್ತಾರೆ. ನಿಪಿ-42 ಫೋಟೊದಲ್ಲಿ ತನ್ನ ಇರುವಿಕೆಯನ್ನು ಸಾಕ್ಷಿಯು ನೋಡಿ ಗುರುತಿಸಿರುತ್ತಾರೆ. ನಂತರ ಸದರಿ ಆರೋಪಿತರು ಉಳವಿಯ ಕುಂಬಾರವಾಡದಲ್ಲಿ ತಾವು ಕಬ್ಬಿಣದ ಪಟ್ಟಿಯನ್ನು ಕೊಟ್ಟು ಕತ್ತಿಯನ್ನು ಮಾಡಲು ಹೇಳಿದ ಸ್ಥಳವನ್ನು ತೋರಿಸುತ್ತೇವೆ ಎಂದು ಹೇಳಿ ಆರೋಪಿತರು ನಮ್ಮನ್ನು ಕುಂಬಾರವಾಡದ ಸುರೇಶ ಆಚಾರ್ ರವರ ಮನೆಗೆ ಕರೆದುಕೊಂಡು ಹೋಗಿದ್ದು, ಅಲ್ಲಿ ಸದರಿ ಸುರೇಶ ಆಚಾರ್ ರವರು ಮನೆಯಲ್ಲಿದ್ದು, ಆರೋಪಿತರು ಕತ್ತಿ ಮಾಡಲು ನೀಡಿದ ಕಬ್ಬಿಣದ ಪಟ್ಟಿಯನ್ನು ಹಾಜರುಪಡಿಸಿದ್ದು, ಪೊಲೀಸರು ಅದನ್ನು ಜಪ್ತುಪಡಿಸಿಕೊಂಡು ನಿಪಿ-56 ರಂತೆ ಪಂಚನಾಮೆ ಮಾಡಿರುತ್ತಾರೆ ಹಾಗೂ ನಿಪಿ-32 ರಂತೆ ಫೋಟೊ ತೆಗೆದಿರುತ್ತಾರೆ. ಸದರಿ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಪಂಚನಾಮೆಯಲ್ಲಿನ ಸಾಕ್ಷಿಯ ಸಹಿಯನ್ನು

ನಿಪಿ–56(ಡಿ) ಮತ್ತು ನಿಪಿ–56(ಈ) ಎಂದು ಗುರುತಿಸಲಾಯಿತು. ನಿಪಿ–32 ರಂತೆ ಫೋಟೊದಲ್ಲಿ ತಾನು ಇರುವುದಾಗಿ ಹಾಗೂ ಸುರೇಶ ಆಚಾರ್ ರವರು ಕಬ್ಬಿಣದ ಪಟ್ಟಿಯನ್ನು ನೀಡುತ್ತಿರುವ ಮತ್ತು ಆರೋಪಿತರು ಇರುವ ಬಗ್ಗೆ ನೋಡಿ ಗುರುತಿಸಿರುತ್ತಾರೆ. ಪೊಲೀಸರು ಜಪ್ತುಪಡಿಸಿಕೊಂಡ ಕಬ್ಬಿಣದ ಪಟ್ಟಿಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಎಂ.ಓ–12 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ಎಂ.ಓ–12(ಬಿ) ಎಂದು ಗುರುತಿಸಲಾಯಿತು. ಸದರಿ ಜಪ್ತುಪಂಚನಾಮೆಯನ್ನು ಮಧ್ಯಾಹ್ನ 12.30 ರಿಂದ ಸಂಜೆ 5.00 ರವರೆಗೆ ಮಾಡಿರುತ್ತಾರೆ.

2. ಆದಾದ 3 ದಿನಗಳ ನಂತರ ಕಾರವಾರದ ನಗರ ಠಾಣಾ ಪೊಲೀಸರು ಪುನಃ ನಮ್ಮನ್ನು ಪಂಚನಾಮೆಗೆ ಠಾಣೆಗೆ ಕರೆಸಿದ್ದರು. ಅಲ್ಲಿ ಪೊಲೀಸರು ಮೃತನ ಶವ ಪರೀಕ್ಷಾ ಕಾಲಕ್ಕೆ ಸಂಗ್ರಹಿಸಿದ್ದ 9 ವಸ್ತುಗಳನ್ನು ತಂದು ಹಾಜರುಪಡಿಸಿದ್ದು, ಅವುಗಳನ್ನು ಪಂಚನಾಮೆಯ ಮೂಲಕ ಜಪ್ತುಪಡಿಸಿಕೊಂಡಿರುತ್ತಾರೆ ಹಾಗೂ ಆ ಪಂಚನಾಮೆಗೆ ನಾನು ಸಹಿ ಮಾಡಿರುತ್ತೇನೆ. ಸದರಿ ಪಂಚನಾಮೆಯನ್ನು ಸಾಕ್ಷಿಯು ನೋಡಿ ಗುರುತಿಸಿದ್ದು, ಅದನ್ನು ನಿಪಿ–57 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ–57(ಸಿ) ಎಂದು ಗುರುತಿಸಲಾಯಿತು. ಈಗ ನ್ಯಾಯಾಲಯದ ಮುಂದಿರುವ 2 ಮತ್ತು 3 ನೇ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಪರ ಶ್ರೀ ಎ.ಎ.ಎ. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 2 ಮತ್ತು 3 ನೇ ಆರೋಪಿ ಪರ ಶ್ರೀ ಎಲ್.ಎಸ್.ಕೆ. ವಕೀಲರಿಂದಃ–**

3. ನನ್ನ ವಾಸ ಸ್ಥಳ ಕಾರವಾರದ ಹಬ್ಬುವಾಡ ಹಾಗೂ ಈಗಲೂ ನಾನು ಅಲ್ಲಿಯೇ ವಾಸವಿರುತ್ತೇನೆ. ನಾನು ಸೆಂಟ್ರಿಂಗ್ ಕೆಲಸ ಮಾಡುತ್ತಿದ್ದೇನೆ. ನಾನು ಬೆಳಿಗ್ಗೆ 9.00 ರಿಂದ ಸಂಜೆ 5.30 ಗಂಟೆಯವರೆಗೆ ಮಾಡುತ್ತೇನೆ. ನನ್ನ ಸ್ನೇಹಿತ ಚಾಸಾ–11 ರಾಘವೇಂದ್ರ ನಾಯ್ಕ ಚಾಲಕ ಕೆಲಸ ಮಾಡುತ್ತಾನೆ ಹಾಗೂ ರೇತಿ ಕೆಲಸ ಮಾಡುತ್ತಾನೆ. ಆತನು ಮೂಲತಃ ಹೊನ್ನಾವರದವನು. ಹಬ್ಬುವಾಡದಿಂದ ಕಾರವಾರದ ಸವಿತಾ ಹೋಟೆಲು ಎರಡೂವರೆ ಕಿ.ಮೀ. ಅಂತರ ಇರುತ್ತದೆ. ಪೊಲೀಸರು ನಮ್ಮನ್ನು ಕರೆದ ದಿನ ನಾವು ಇಬ್ಬರು ಕೆಲಸಕ್ಕೆ ರಜಾ ಹಾಕಿ ಹೊಟೇಲಿನಲ್ಲಿ ಚಹಾ ಸೇವಿಸುತ್ತಿದ್ದೆವು. ನಮ್ಮನ್ನು ಕರೆದ ಪೊಲೀಸರ ಹೆಸರ ನಮಗೆ ಗೊತ್ತಿಲ್ಲ,

ಆದರೆ ಅವರು ಪೊಲೀಸರಾಗಿರುತ್ತಾರೆ. ಪೊಲೀಸರು ನಮ್ಮನ್ನು ಕರೆದಾಗ, ಆದಿನ 10.30 ರಿಂದ 11.30 ಗಂಟೆಯಾಗಿರಬಹುದು. ಪೊಲೀಸರು ಪಂಚನಾಮೆಗೆ ಬರುವಂತೆ ನನ್ನ ಸ್ನೇಹಿತನಿಗೆ ಫೋನ್ ಮೂಲಕ ತಿಳಿಸಿರುತ್ತಾರೆ. ನಾವು ಸಂಡೇ ಮಾರ್ಕೆಟ್‌ಗೆ ಹೋಗಲು ಸುಮಾರು 10 ನಿಮಿಷವಾಗಿರುತ್ತದೆ. ಪೊಲೀಸರು ನಮಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ.

4. ಚಾಸಾ-11 ರವರ ಸ್ಕೂಟರಿನಲ್ಲಿ ನಾವು ಸಂಡೇ ಮಾರ್ಕೆಟ್‌ಗೆ ಹೋಗಿರುತ್ತೇವೆ. ನಾವು ಮೊದಲೇ ಹೋಗಿದ್ದು, ಆನಂತರ ಪೊಲೀಸರು ಬಂದಿರುತ್ತಾರೆ. ಸಂಡೇ ಮಾರ್ಕೆಟ್‌ಗೆ ಕರೆದುಕೊಂಡು ಹೋಗಿದ್ದ ಅಂಗಡಿ ಯಾರಿಗೆ ಸೇರಿದ್ದು ಎಂದು ನನಗೆ ಗೊತ್ತಿಲ್ಲ. ಅಂಗಡಿಯ ಮಾಲೀಕರೊಂದಿಗೆ ಪೊಲೀಸರು ಏನು ಮಾತನಾಡಿದರು ಎಂದು ನನಗೆ ಗೊತ್ತಿಲ್ಲ. ಪೊಲೀಸರು ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಸಂಡೇ ಮಾರ್ಕೆಟ್‌ನಲ್ಲಿ ನಮ್ಮ ಸಹಿಯನ್ನು ಪಡೆದುಕೊಂಡಿಲ್ಲ. ಸಂಡೇ ಮಾರ್ಕೆಟ್ ನಲ್ಲಿ ಫೋಟೊ ತೆಗೆಯುವಾಗ ಪೊಲೀಸರು ನಮಗೆ ಇದೇ ರೀತಿ ನಿಲ್ಲಬೇಕು ಎಂದು ಹೇಳಿರುವುದಿಲ್ಲ. ಪೊಲೀಸರು ನಮಗೆ ಫೋಟೊ ತೆಗೆಯಲು ನಿಲ್ಲುವಂತೆ ಹೇಳಿ ಫೋಟೊ ತೆಗೆದಿರುತ್ತಾರೆ, ಆಗ ಸಮಯ ಎಷ್ಟಾಗಿತ್ತು ಎಂದು ನನಗೆ ನೆನಪಿಲ್ಲ. ಸಂಡೇ ಮಾರ್ಕೆಟ್‌ನ ಪಂಚನಾಮೆಯ ನಂತರ ಪೊಲೀಸರು ನಮ್ಮನ್ನು ಪೊಲೀಸ್ ವಾಹನದಲ್ಲಿ ಪಂಚನಾಮೆಗೆ ಕುಂಬಾರವಾಡಕ್ಕೆ ಕರೆದುಕೊಂಡು ಹೋದರು. ಸಂಡೇ ಮಾರ್ಕೆಟ್ ನಿಂದ ಕುಂಬಾರವಾಡಕ್ಕೆ ಎಷ್ಟು ಕಿ.ಮೀ ಆಗುತ್ತದೆ ಎಂದು ನನಗೆ ಗೊತ್ತಿಲ್ಲ. ನಾವು ಇಲ್ಲಿಂದ ಹೊರಟಾಗ ಎಷ್ಟು ಸಮಯವಾಗಿತ್ತು ಎಂದು ನನಗೆ ನೆನಪಿಲ್ಲ.

5. ಕುಂಬಾರವಾಡದಲ್ಲಿ ಸುರೇಶ ಆಚಾರ್ ರವರ ಮನೆ ಇರುತ್ತದೆ. ಸದರಿಯವರ ಮನೆಯ ದೂರ-ದೂರದಲ್ಲಿ ಇತರ ಮನೆಗಳು ಇದ್ದವು. ನಾವು ಅಲ್ಲಿಗೆ ಹೋದಾಗ ಊರಿನ ಜನರು ಯಾರೂ ಬಂದಿರಲಿಲ್ಲ. ನಾವು ಹೋದಾಗ, ಸುರೇಶ ಆಚಾರ್ ರವರ ಮನೆಯಲ್ಲಿ ಒಟ್ಟು 4 ಜನರು ಇದ್ದರು. ಸುರೇಶ ಆಚಾರ್ ರವರ ಜೊತೆ ಪೊಲೀಸರು ಏನು ಮಾತನಾಡಿದರು ಎಂದು ನನಗೆ ಗೊತ್ತಿಲ್ಲ. ಮು.ಮಾ-12 ಕಬ್ಬಿಣದ ಪಟ್ಟಿಯನ್ನು ಸುರೇಶ ಆಚಾರ್ ರವರು ಪೊಲೀಸರಿಗೆ ಕೊಟ್ಟಾಗ ನಾನು ಸ್ವಲ್ಪ ದೂರದಲ್ಲಿದ್ದೆ. ಸುರೇಶ್ ಆಚಾರ್ ರವರ ಮನೆಯ ಒಳಗೆ ಹೋಗಿ ಅವರು ಏನು ಕೆಲಸ ಮಾಡುತ್ತಾರೆ ಎಂದು ನಾನು ನೋಡಿರುವುದಿಲ್ಲ. ಸುರೇಶ್ ಆಚಾರ್ ರವರು ಕಬ್ಬಿಣದ ಪಟ್ಟಿಯನ್ನು ಮನೆಯ ಒಳಗಿನ ಯಾವ ಭಾಗದಿಂದ ತಂದುಕೊಟ್ಟರು ಎಂದು ನನಗೆ ಗೊತ್ತಿಲ್ಲ. ಅಲ್ಲಿ ಪೊಲೀಸರು ಫೋಟೊ ತೆಗೆಯುವಾಗ ನಮ್ಮನ್ನು ನಿಲ್ಲುವಂತೆ ಹೇಳಿರುತ್ತಾರೆ. ಅಲ್ಲಿ ಪೊಲೀಸರು

ನಮ್ಮ ಸಮಕ್ಷಮ ಏನೂ ಬರೆದಿರುವುದಿಲ್ಲ. ನಿಪಿ–56(ಡಿ) ಸಹಿಯನ್ನು ಎಲ್ಲಿ ಮಾಡಿದ್ದೆ ಎಂದು ನನಗೆ ನೆನಪಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಪಂಚನಾಮೆ ಮಾಡದೇ ಇದ್ದರೂ ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸ್ ಠಾಣೆಯಲ್ಲಿ ತಯಾರು ಮಾಡಿದ ಪಂಚನಾಮೆಗೆ ಠಾಣೆಯಲ್ಲಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

6. ಪೊಲೀಸರು ನಮ್ಮನ್ನು ಪುನಃ ಪಂಚನಾಮೆಗೆ ಕರೆದಾಗ ಫೋನ್ ಮಾಡಿ ಕರೆದಿರುತ್ತಾರೆ, ದಿನಾಂಕ ನನಗೆ ನೆನಪಿಲ್ಲ ಆದರೆ, ಮಧ್ಯಾಹ್ನವಾಗಿತ್ತು ಎಂದು ನುಡಿಯುತ್ತಾರೆ. ಆನಂತರ, ಸಂಜೆ 5.30 ಗೆ ಕೆಲಸ ಮುಗಿಸಿದ ನಂತರ ಹೋಗಿರುವುದಾಗಿ ನುಡಿಯುತ್ತಾರೆ. ಪೊಲೀಸ್ ಠಾಣೆಯಲ್ಲಿ ಜಪ್ತುಪಡಿಸಿಕೊಂಡ 9 ವಸ್ತುಗಳು ಏನೇನು ಇದ್ದವು ಎಂದು ನನಗೆ ಗೊತ್ತಿಲ್ಲ ಹಾಗೂ ಪಂಚನಾಮೆಯಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ಸಹಿ ಮಾಡಲು ಹೇಳಿದ್ದರಿಂದ ನಾನು ಸಹಿ ಮಾಡಿರುತ್ತೇನೆ.

**ಪಾಟೀ ಸವಾಲುಃ 4 ನೇ ಆರೋಪಿ ಪರ ಶ್ರೀ ಎನ್.ವಿ.ಎನ್. ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಪಾಟೀ ಸವಾಲುಃ 5 ನೇ ಆರೋಪಿ ಶ್ರೀ ಹೆಚ್ ಎಸ್ ಎಸ್ ವಕೀಲರಿಂದಃ–**

ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

(ಮಾಯಣ್ಣ ಬಿ.ಎಲ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರಕನ್ನಡ, ಕಾರವಾರ.